ಕಾಂಡೋಮ್‌ಗಳನ್ನು ಮಾರಿ ಕೋಟ್ಯಧಿಪತಿಗಳಾದವರನ್ನೂ ಕಂಡಿದ್ದೇನೆ. ಬದುಕಿನ ಅಂಥ ಸತ್ಯಗಳು, ಸಂವೇದನೆಗಳೇ ಬೇರೆ. ಅವನ್ನೆಲ್ಲ ನನ್ನ ಕಥೆಗಳಲ್ಲಿ ಅಭಿವ್ಯಕ್ತಿಸಿದ್ದೇನೆ. ಕಾಮ ಮತ್ತು ಹಸಿವು ಎಲ್ಲ ಸೃಷ್ಟಿಕ್ರಿಯೆಗಳ ಹಿಂದಿನ ಮೂಲದ್ರವ್ಯ ಎನ್ನುವುದನ್ನು ನಾನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೇನೆ.

◆ **ನಿಮ್ಮ ಕಥೆಗಳ, ಆತ್ಮಕಥನಾತ್ಮಕ ಬರಹಗಳ ಮುಖ್ಯ ಆಕರ್ಷಣೆ ಅವುಗಳ ಭಾಷೆ. ನೀವು ಅರ್ಥಶಾಸ್ತ್ರದ ವಿದ್ಯಾರ್ಥಿಯಾಗಿದ್ದವರು. ತೆಲುಗು ಮಾತೃಭಾಷೆಯ ನೀವು ಸಾಹಿತ್ಯದ ವಿದ್ಯಾರ್ಥಿಗಳನ್ನೂ ನಾಚಿಸುವಂತೆ ಕನ್ನಡ ಭಾಷೆಯನ್ನು ದಕ್ಕಿಸಿಕೊಂಡ ಪರಿ ಹಾಗೂ ಗಡಿಭಾಗದ ಆಡುನುಡಿಯಲ್ಲಿ ಕಥೆಗಳನ್ನು ಅಭಿವ್ಯಕ್ತಿಸಿದ ರೀತಿ ಅನನ್ಯ. ಇದು ನಿಮಗೆ ಸಾಧ್ಯವಾಗಿದ್ದು ಹೇಗೆ?**

ಎಂ.ಎ. ಮುಗಿದ ಮೇಲೆ ನಾನು ಎರಡು ವರ್ಷ ಊರಿನಲ್ಲೇ ಬೇಸಾಯ ಮಾಡಿಕೊಂಡಿದ್ದೆ. ಅದಾದ ಮೇಲೆ ಮಂಡ್ಯದ ಕೆಸ್ತೂರಿನಲ್ಲಿ ಲೆಕ್ಚರರ್ ಆಗಿ ಕೆಲಸ ಮಾಡಿದೆನಾದರೂ ಅದರಿಂದ ನನ್ನ ಭಾಷಾ ಪ್ರೌಢಿಮೆಯೇನೂ ಹೆಚ್ಚಾಗಲಿಲ್ಲ. ನಂತರ ನಾನು ವಾಣಿಜ್ಯ ತೆರಿಗೆ ಇಲಾಖೆಯನ್ನು ಸೇರಿದೆ. ಆರಂಭದಲ್ಲಿ ಆ ಕೆಲಸ ಒಗ್ಗದೇ ರಾಜೀನಾಮೆ ಕೊಟ್ಟು ಲೆಕ್ಚರರ್ ಕೆಲಸಕ್ಕೆ ವಾಪಸ್ಸಾಗಲು ಪ್ರಯತ್ನಿಸಿದೆನಾದರೂ ಸ್ನೇಹಿತರ, ಹಿತೈಷಿಗಳ ಒತ್ತಡದಿಂದಾಗಿ ಅಲ್ಲೇ ಉಳಿದೆ. ಅದರಿಂದ ನನಗಾದ ಪ್ರಯೋಜನ ಎಂದರೆ ಸಮಾಜದ ವಿಭಿನ್ನ ಸ್ತರಗಳ ಜನರ ಜೊತೆ ನನಗೆ ಸಂಪರ್ಕವೇರ್ಪಟ್ಟಿತು. ಇದು ನನಗೆ ವಿಭಿನ್ನ ಅನುಭವಗಳನ್ನು ಒದಗಿಸಿದ್ದರ ಜೊತೆಗೆ ನನ್ನ ಭಾಷೆಯನ್ನೂ ಬೆಳೆಸಿತು. ಅದಕ್ಕೂ ಮುನ್ನ ನನ್ನ ಅನುಭವಗಳನ್ನು ಕಥೆಗಳನ್ನಾಗಿ, ನೆನಪಿನ ಮಾಲಿಕೆಯನ್ನಾಗಿ ಚಿತ್ರಿಸುವಲ್ಲಿ ನಾನು ಮಾಡಿದ ಮುಖ್ಯ ಕೆಲಸ ನನ್ನ ಹಳ್ಳಿಯ ಭಾಷೆಯನ್ನು ತದ್ವತ್ತಾಗಿ ಬಳಸಿದ್ದು. ಸಾಮಾನ್ಯವಾಗಿ ಹಳ್ಳಿಗಳಲ್ಲಿ, ಕೃಷಿಕ ಕುಟುಂಬಗಳಲ್ಲಿ ಭಾಷೆಯನ್ನು ಅತ್ಯಂತ ಸಹಜವಾಗಿ, ಶ್ಲೀಲ ಅಶ್ಲೀಲಗಳ ಹುಸಿನೈತಿಕ ಪರಿಧಿಯನ್ನು ಲೆಕ್ಕಿಸದೇ ಬಳಸಲಾಗುತ್ತದೆ. ನಾನು ಅದನ್ನೇ ನನ್ನ ಅನುಭವಗಳ ಮಂಡನೆಯ ಭಾಷೆಯನ್ನಾಗಿ ಬಳಸಿದೆ. ಇದರಿಂದ ನನ್ನ ಕಥೆಗಳಿಗೆ, ಅನುಭವ ಕಥನಗಳಿಗೆ ಗಟ್ಟಿತನ ಬಂದಿದ್ದಲ್ಲದೇ, ಒಂದು ರೀತಿಯ ಅಥೆಂಟಿಸಿಟಿ ಕೂಡ ಪ್ರಾಪ್ತವಾಯಿತು. ನಾನು ಬೆಂಗಳೂರಿಗೆ ಬಂದ ಮೇಲೆ ಶಿಷ್ಟ ಕನ್ನಡ ಕೂಡ ನನಗೆ ಅದ್ಭುತವಾಗಿ ಒಲಿಯಿತು. ಶಿಷ್ಟ ಭಾಷೆಯಲ್ಲಿ ನನ್ನ ಪ್ರೇಮಕಥೆಗಳು, ನಗರಕೇಂದ್ರಿತ ಬದುಕಿನ ಕಥೆಗಳು ಬಂದವು.

◆ **ನಿಮಗೆ ಅತಿ ಹೆಚ್ಚು ಇಷ್ಟವಾದ ಅಥವಾ ಪ್ರಭಾವ ಬೀರಿದ ಲೇಖಕ ಯಾರು?**

ನಾನು ಸಾಹಿತ್ಯವನ್ನು ಶಾಲೆ ಕಾಲೇಜುಗಳಲ್ಲಿ ಕಲಿತವನಲ್ಲ. ಅದರಾಚೆಗೂ ಕುವೆಂಪು, ಕಾರಂತ, ಬೇಂದ್ರೆ ಇತ್ಯಾದಿ ಬರಹಗಾರರನ್ನು ಹೆಚ್ಚು ಓದಿಕೊಂಡವನಲ್ಲ. ಹಾಗಾಗಿ ಕನ್ನಡದ ಬಹು ಮುಖ್ಯ ಲೇಖಕರು ನನ್ನ ಮೇಲೆ ಅಂತಹ ಪ್ರಭಾವ ಬೀರಲಿಲ್ಲ. ಇನ್ನು ಇಷ್ಟದ ಲೇಖಕ ಎಂದು ಹೇಳುವುದಾದರೆ, ಅದು ಬೆಸಗರಹಳ್ಳಿ ರಾಮಣ್ಣನೇ. ಗ್ರಾಮೀಣ ಬದುಕನ್ನು ಅವರು ಕಟ್ಟಿಕೊಟ್ಟ ರೀತಿ ನನಗೆ ಬಹಳಾನೇ ಪ್ರಿಯವಾಗಿತ್ತು. ಅವರು ಚಿತ್ರಿಸಿದ ಪಾತ್ರಗಳು ನನ್ನವೂ ಆಗಿದ್ದವು. ಜಾಗತಿಕ ಸಾಹಿತ್ಯದ ಮಟ್ಟಿಗೆ ಹೇಳುವುದಾದರೆ, ಕನ್ನಡಕ್ಕೆ ತರ್ಜುಮೆಗೊಂಡಿರುವ ಮಾರ್ಕ್ಸ್‌ವಾದಿ ಸಾಹಿತ್ಯ ನನಗೆ ಹೆಚ್ಚು ಇಷ್ಟ. ಕಾರ್ಲ್ ಮಾರ್ಕ್ಸ್, ಮಾಕ್ಸಿಂ ಗಾರ್ಕಿ, ದಸ್ತೋವ್‌ಸ್ಕಿ ಅವರ ಕೃತಿಗಳು ನನಗೆ ಹುಚ್ಚು ಹಿಡಿಸಿದ್ದವು. ಮಾರ್ಕ್ಸ್ ನನ್ನ ಮೇಲೆ ಅತೀವ ಪ್ರಭಾವ ಬೀರಿದ ಚಿಂತಕ ಹಾಗೂ ಲೇಖಕ. ಹಾಗೆಯೇ ಗಾಂಧಿ ಅವರ ಬರಹಗಳು, ಚಿಂತನಗಳು ಕೂಡ ನನಗೆ ಪ್ರಿಯವಾದವು.